

# ‘ಬಿಎಸ್‌ವೈ ತಂಗಿ ಮಗನ ಜಮೀನಿಗೆ ಅನುಕೂಲ ಮಾಡಿಕೊಡಲು ಅನುದಾನ’

ಪ್ರಜಾವಾಣಿ ವಾರ್ತೆ 5-4-21

ಮೈಸೂರು: ‘ಹುಣಸೂರು ತಾಲ್ಲೂಕಿನ ಕಟ್ಟೆಮಳಲವಾಡಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟೆ ದುರಸ್ತಿಗೆ ತುರ್ತಾಗಿ ಅನುದಾನ ಬಿಡುಗಡೆ ಮಾಡಿ ಎಂದು ಗೋಗರೆದರೂ ನಯಾಪೈಸೆ ನೀಡದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ತಮ್ಮ ತಂಗಿ ಮಗನ ಜಮೀನಿಗೆ ಅನುಕೂಲ ಮಾಡಿಕೊಡಲು ₹ 3.26 ಕೋಟಿ ಬಿಡುಗಡೆ ಮಾಡಿದ್ದಾರೆ’ ಎಂದು ಹುಣಸೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಪಿ.ಮಂಜುನಾಥ್ ಭಾನುವಾರ ಇಲ್ಲಿ ಆರೋಪಿಸಿದರು.

‘ಮೈಮುಲ್‌ನ ನಾಮನಿರ್ದೇಶಿತ ಸದಸ್ಯ, ತಮ್ಮ ಸಹೋದರಿ ಪುತ್ರ ಎಸ್.ಸಿ.ಅಶೋಕ್ ಧರ್ಮಪುರ ಬಳಿಯ ದೈತ್ಯನ ಕೆರೆ ಸನಿಹ ಹೊಂದಿರುವ 16 ಎಕರೆ ಒತ್ತುವರಿ ಜಮೀನಿಗೆ ತಡೆಗೋಡೆ ನಿರ್ಮಿಸಲು, ದಾರಿ ಮಾಡಿಕೊಡಲು ಕೆರೆ ಅಭಿವೃದ್ಧಿ ಹೆಸರಿನಲ್ಲಿ ಅನುದಾನ ಬಿಡುಗಡೆ ಮಾಡಿದ್ದಾರೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಬಳಿ ಸಂಸದ ಪ್ರತಾಪಸಿಂಹ ಏಳು ತಿಂಗಳ ಹಿಂದೆ ₹ 5 ಕೋಟಿ ಅನುದಾನ ಬಿಡುಗಡೆ ಮಾಡಿಸಿಕೊಂಡು ಬಂದು, ಕಾಮಗಾರಿ ನಡೆಸುವಂತೆ ಬಿಜೆಪಿ ಕಾರ್ಯಕರ್ತರಿಗೆ ಸೂಚಿಸಿದ್ದರು. ಆದರೆ, ಈ ಅನುದಾನವನ್ನು ಮುಖ್ಯಮಂತ್ರಿ ತಡೆ ಹಿಡಿದಿದ್ದಾರೆ. ಹುಣಸೂರಿಗೆ ಅನುದಾನ ಕೊಡಬೇಕೆಂದರೆ ಮುಖ್ಯಮಂತ್ರಿ ಸಂಬಂಧಿಕರು ಅಥವಾ ಕುಟುಂಬಸ್ಥರು ಇರಬೇಕೇ?’ ಎಂದು ಪ್ರಶ್ನಿಸಿದರು.

**ಸಚಿವರೇ ಮರ್ಮಾಘಾತದಲ್ಲಿದ್ದಾರೆ. ಬಿಜೆಪಿ ಶಾಸಕರಿಗೆ ಅನುದಾನ ಕೊಡ್ತಿಲ್ಲ. ಕುಟುಂಬಕ್ಕಷ್ಟೇ ಯಡಿಯೂರಪ್ಪ ಸೀಮಿತವಾಗಿದ್ದಾರೆ.**

**ಎಚ್.ಪಿ.ಮಂಜುನಾಥ್,**
ಹುಣಸೂರು ಶಾಸಕ

**₹ 42 ಕೋಟಿ ಮಂಜೂರು:** ‘ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಅನುದಾನವನ್ನೇ ನೀಡುತ್ತಿಲ್ಲ. ಪುತ್ರ ವಿಜಯೇಂದ್ರ ಶಿಫಾರಸಿನಂತೆ ₹ 42 ಕೋಟಿ ಮಂಜೂರು ಮಾಡಲಾಗಿತ್ತು. ಬೇಡದ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂಬ ಆಕ್ಷೇಪ ವ್ಯಕ್ತಪಡಿಸಿ ಪತ್ರ ಬರೆದೆ.’ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ದೂರಿದರು.